## ರೋಗ ತಡೆಗಟ್ಟುವ ಮುಂಜಾಗ್ರತಾ ಕ್ರಮಗಳು:

ಒಂದು ಸಾರಿ ರೇಬಿಸ್ ರೋಗದ ಲಕ್ಷಣಗಳು ಕಾಣಿಸಿಕೊಂಡರೆ ನಂತರ ಈ ರೋಗಕ್ಕೆ ಯಾವುದೇ ಚಿಕಿತ್ಸೆ ಇಲ್ಲ, ಸಾವೇ ಗತಿ. ಆದ್ದರಿಂದ ರೇಬಿಸ್ ರೋಗ ತಡೆಗಟ್ಟಲು ಸಾಕು ಪ್ರಾಣಿಗಳಿಗೆ ಮುಂಜಾಗ್ರತೆ ಕ್ರಮವಾಗಿ ಪಶುವೈದ್ರ ಸಲಹೆಯಂತೆ ಲಸಿಕೆ ಹಾಕಿಸುವುದು ಒಂದೆ ಮಾರ್ಗ. ಎಲ್ಲಾ ಆರೋಗ್ಯವಾಗಿರುವ ನಾಯಿಗಳಿಗೆ ಪ್ರತಿ ವರ್ಷ ರೇಬಿಸ್ ಲಸಿಕೆ ಹಾಕಿಸುವುದು ಬಹಳ ಮುಖ್ಯ. ಇದರಿಂದ ಪ್ರಾಣಿಗಳ ಮತ್ತು ಮನುಷ್ಯರ ಜೀವ ಹಾನಿಯನ್ನು ತಪ್ಪಿಸಬಹುದಲ್ಲದೆ ರೇಬಿಸ್ ರೋಗವನ್ನು ಶೇ.100 ರಷ್ಟು ತಡೆಗಟ್ಟಬಹುದು.

## ರೇಬಿಸ್ ಲಸಿಕೆಯ ಕ್ರಮ:

ಪ್ರಾಥಮಿಕ ಲಸಿಕೆಯನ್ನು ನಾಯಿಗೆ 3 ತಿಂಗಳ ವಯಸ್ಸಿನ ಮರಿಗಳಿಗೆ ಹಾಕಿಸಬೇಕು. ನಂತರ ಹೆಚ್ಚುವರಿಯಾಗಿ (ಬೂಸ್ಟರ್) ಲಸಿಕೆಯನ್ನು 4 ತಿಂಗಳ ವಯಸ್ಸಿಗೆ ಹಾಕಿಸಿ ತದನಂತರ ವರ್ಷಕ್ಕೊಮ್ಮೆ ಜೀವಿತಾವಧಿವರೆಗೂ ಪುನರಾವರ್ತಿಸಬೇಕು, ಆಕಸ್ಮಿಕವಾಗಿ ನಾಯಿಕಚ್ಚಿದರೆ ಅಲಕ್ಷಿಸದೇ ಈ ಕೆಳಕಂಡಂತೆ 6 ಬಾರಿ ನಿಗದಿತ ವೇಳೆಗೆ ರೇಬಿಸ್ ಲಸಿಕೆ ಹಾಕಿಸಬೇಕು.

| ದಿನ | ಲಸಿಕೆ |
|---|---|
| 0 | ಮೊದಲನೆಯ |
| 3 | ಎರಡನೆಯ |
| 7 | ಮೂರನೆಯ |
| 14 | ನಾಲ್ಕನೆಯ |
| 28 | ಐದನೆಯ |
| 90 | ಆರನೆಯ (ಸೂಪರ್ ಡೋಸ್) |

## ನಾಯಿಕಚ್ಚಿದ ತಕ್ಷಣ ಅನುಸರಿಸಬೇಕಾದ ಪ್ರಾಥಮಿಕ ಸೂಚನೆಗಳು:

ಒಬಿದು ವೇಳೆ ಪ್ರಾಣಿಗಳು ಅಥವಾ ಮನುಷ್ಯರು ಹುಚ್ಚು ನಾಯಿ ಕಡಿತಕ್ಕೆ ಒಳಗಾದರೆ ಗಾಯವನ್ನು ತಕ್ಷಣ ಸಾಬೂನಿನಿಂದ (ಲೈಫ್ ಬಾಯ) ತೊಳೆಯಬೇಕು, ನಂತರ ಯಾವುದೇ ಆಂಟಿಸೆಪ್ಟಿಕ್ (ಸಾವ್ಲಾನ್/ಡೆಟಾಲ್) ದ್ರಾವಣವನ್ನು ಗಾಯಕ್ಕೆ ಲೇಪಿಸಬೇಕು. ರೋಗ ಬಂದ ನಾಯಿ, ಇತರೇ ಪ್ರಾಣಿ ಮತ್ತು ಅವುಗಳ ಜೊಲ್ಲನ್ನು ಮುಟ್ಟಬಾರದು. ಗಾಯಕ್ಕೆ ಯಾವುದೇ ಹೊಲಿಗೆ, ಬ್ಯಾಂಡೇಜ್ ಹಾಕಿಸಬಾರದು ಅಥವಾ ಅರಿಶಿಣ, ಗಿಡಮೂಲಿಕೆಗಳ ರಸ ಹಚ್ಚಬಾರದು. ತಕ್ಷಣ (24 ಗಂಟೆಯೊಳಗೆ) ಪಶುವೈದ್ಯರನ್ನು ಸಂಪರ್ಕಿಸಿ ರೇಬಿಸ್ ಲಸಿಕೆಯನ್ನು ಹಾಕಿಸಬೇಕು.


ಲೇಖಕರು

ಡಾ. ಜಯಶ್ರೀ ಪತ್ತಾರ
ವಿಜ್ಞಾನಿಗಳು (ಪಶು ವಿಜ್ಞಾನ ವಿಭಾಗ)

ಸಂಪಾದಕರು ಹಾಗೂ ಪ್ರಕಾಶಕರು

ಡಾ. ಶುಭಾ ಎಸ್.
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಕೃವಿಕೇಂ. ಧಾರವಾಡ

ಅಕ್ಷರ ಜೋಡಣೆ ಮತ್ತು ವಿನ್ಯಾಸ
ಶ್ರೀಮತಿ ಶೈಲಜಾ ಗಲಗಲಿ

ಕೃಷಿ ವಿಜ್ಞಾನ ಕೇಂದ್ರ, ಸೈದಾಪೂರ ಫಾರ್ಮ
ಧಾರವಾಡ-580005
ತಾ: ಧಾರವಾಡ , ಜಿ: ಧಾರವಾಡ
ಕರ್ನಾಟಕ ರಾಜ್ಯ
ಮೊ:0836-2444272



ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಐ.ಸಿ.ಎ.ಆರ್-ಕೃಷಿ ವಿಜ್ಞಾನ ಕೇಂದ್ರ, ಸೈದಾಪೂರ ಫಾರ್ಮ, ಧಾರವಾಡ


# "ವಿಶ್ವ ರೇಬೀಸ್ ದಿನ"
# ಸೆಪ್ಟೆಂಬರ್ 28








ಹಸ್ತ ಪತ್ರಿಕೆ

ಸೆಪ್ಟೆಂಬರ್ 2017

## ವಿಶ್ವ ರೇಬಿಸ್ ದಿನ- ಸಪ್ಟೆಂಬರ 28

ಮೊದಲ ಬಾರಿಗೆ ಲೂಯಿಸ್ ಪಾಶ್ಚರ್ ವಿಜ್ಞಾನಿಯು ರೇಬಿಸ್ (ಹುಚ್ಚು ನಾಯಿ) ರೋಗಗಕ್ಕೆ ಲಸಿಕೆಯನ್ನು ಅಭಿವೃದ್ದಿಪಡಿಸಿರುತ್ತಾರೆ. ಇವರು 1895 ಸಪ್ಟೆಂಬರ್ 28 ರಂದು ಇಹಲೋಕ ತ್ಯೆಜಿಸಿದರು, ಆದ್ದರಿಂದ ಇವರ ಸ್ಮರಣಾರ್ಥಕವಾಗಿ ವಿಶ್ವ ಆರೋಗ್ಯ ಸಂಸ್ಥೆಯು ಜಗತ್ತಿನಾದ್ಯಂತ ಪ್ರತಿ ವರ್ಷ ಸಪ್ಟೆಂಬರ್ 28 ರಂದು ವಿಶ್ವ ರೇಬಿಸ್ ದಿನವನ್ನಾಗಿ ಆಚರಿಸುವರು. ಈ ದಿನವು, ಮನುಷ್ಯರು ಮತ್ತು ಪ್ರಾಣಿಗಳ ಮೇಲೆ ರೇಬಿಸ್ ರೋಗದ (ಹುಚ್ಚು ನಾಯಿ) ಪ್ರಭಾವ ಮತ್ತು ತಡೆಗಟ್ಟವಿಕೆಯ ಕ್ರಮಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶವನ್ನು ಹೊಂದಿದೆ.

### ರೇಬಿಸ್ ರೋಗ ಎಂದರೇನು?



ರೇಬಿಸ್ (ಹುಚ್ಚು ನಾಯಿ) ರೋಗವು ಒಂದು ಮಾರಣಾಂತಿಕ ವೈರಸ್‌ನಿಂದ ಬರುವ ಪ್ರಾಣಿಜನ್ಯ ರೋಗ. ಪ್ರಾಣಿಗಳಿಂದ ಮನುಷ್ಯರಿಗೆ ಮತ್ತು ಮನುಷ್ಯರಿಂದ ಪ್ರಾಣಿಗಳಿಗೆ ಹರಡುವಂತ ರೋಗಗಳಿಗೆ ಪ್ರಾಣಿಜನ್ಯ ರೋಗ ಎಂದು ಕರೆಯುವರು. ಈ ರೋಗ ಎಲ್ಲಾ ಪ್ರಾಣಿಗಳಲ್ಲಿ ಮತ್ತು ಮನುಷ್ಯರಲ್ಲಿ ಬರುತ್ತದೆ, ಆದರೆ ನಾಯಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ರೇಬಿಸ್ ರೋಗವು ಒಂದು ವಿಶ್ವ ಗಮನಾರ್ಹವಾದ ಮಾರಣಾಂತಿಕ ರೋಗ (ಸಾವಿನ ಪ್ರಮಾಣ ಶೇ. 99). ರೇಬಿಸ್ ರೋಗಗ್ರಸ್ತ ನಾಯಿ ಕಡಿತದಿಂದ ಪ್ರತಿ ವರ್ಷ ವಿಶ್ವದಾದ್ಯಂತ 60 ಸಾವಿರ ಜನ ಸಾವಿಗೀಡಾಗುತ್ತಿದ್ದಾರೆ. ಪ್ರತಿ 10 ನಿಮಿಷಕ್ಕೆ ಒಂದು ಸಾವು ಸಂಭವಿಸುತ್ತಿದೆ, ಇದರಲ್ಲಿ ಶೇ.40 ರಷ್ಟು ಭಾಗ ಮಕ್ಕಳು ರೇಬಿಸ್ ರೋಗಕ್ಕೆ ತುತ್ತಾಗುತ್ತಿದ್ದಾರೆ.

### ರೇಬಿಸ್ ಹರಡುವಿಕೆ ವಿಧಾನ:

ಯಾವುದೇ ರೋಗಗ್ರಸ್ತ ಪ್ರಾಣಿಯು (ನಾಯಿ, ನರಿ, ಬಾವುಲಿ) ಕಚ್ಚುವುದರಿಂದ, ಅಥವಾ ರೋಗಾಣು ಇರುವ ಲಾಲಾರಸ/ಜೊಲ್ಲು ಸಂಪರ್ಕದಿಂದ ಈ ರೋಗ ಹರಡುತ್ತದೆ, ಮುಖ್ಯವಾಗಿ ರೇಬಿಸ್ ನಾಯಿಗಳಿಂದಲೆ (ಶೇ.90) ಹೆಚ್ಚಾಗಿ ಹಬ್ಬುವುದು. ಹುಚ್ಚು ನಾಯಿ ಕಡಿತ ಅಥವಾ ಗಾಯಗಳ ಮೂಲಕ ರೇಬಿಸ್ ವೈರಾಣು ದೇಹವನ್ನು ಸೇರಿ, ರೋಗಾಣು ನರಮಂಡಲದಲ್ಲಿ (ಮೆದಳು, ಬೆನ್ನುಹುರಿ) ಉಲ್ಬಣಗೊಂಡು ಮೆದಳು ಉರಿಯೂತ (Encephalitis) ವಾಗುವುದು, ನಂತರ ಸಾವು ಸಂಭವಿಸಬಹುದು.

### ರೋಗದ ಮುಖ್ಯ ಲಕ್ಷಣಗಳು:

ಮುಖ್ಯವಾಗಿ ಉಗ್ರ ಹಾಗೂ ಮೌನ ಸ್ವರೂಪ ಎಂದು ಎರಡು ವಿಧವಾಗಿ ವಿಂಗಡಿಸಬಹುದು. ನಾಯಿಗಳಲ್ಲಿ ಹೆಚ್ಚಾಗಿ ಉಗ್ರ ಸ್ವರೂಪದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

### ನಾಯಿ:



ನಾಯಿಗಳಲ್ಲಿ ಸೋಂಕು ತಗಲುವಿಕೆಯಿಂದ ಹಿಡಿದು ರೋಗದ ಲಕ್ಷಣಗಳು ಕಾಣಿಸುವ ಅವಧಿಯು 3 ರಿಂದ 6 ವಾರ. ಪ್ರಥಮ ಹಂತದಲ್ಲಿ ಜ್ವರ, ಮನುಷ್ಯರ/ಪ್ರಾಣಿ/ನಿರ್ಜೀವ ವಸ್ತುಗಳ ಮೇಲೆ ಅತೀ ಕ್ರಮಣಶೀಲತೆ ಅಥವಾ ಕೆರಳುವ ಬುದ್ಧಿ ತೊರಿಸುವುದು. ಕಾಯಿಲೆ ಮುಂದುವರೆದಂತೆ, ಸ್ಪರ್ಶ, ಬೆಳಕು ಮತ್ತು ಧ್ವನಿಗೆ ರೋಗಗ್ರಸ್ತ ನಾಯಿಯು ಅತೀ ಸೂಕ್ಷ್ಮಗ್ರಾಹಿಯಾಗುವುದು, ದಿಗ್ಭ್ರಮೆಯುಂಟಾಗಬಹುದು, ಗಂಟಲು ಮತ್ತು ದವಡೆಯ ಸ್ನಾಯುಗಳ ಪಾರ್ಶ್ವವಾಯು, ವೀಪರಿತ ಜೋಲ್ಲು ಸೊರುವುದು, ಹಸಿವು, ದೌರ್ಬಲ್ಯ, ನುಂಗಲು ತೊಂದರೆ, ಜಲಭೀತಿ (ನೀರಿನ ಭಯ) ಇವೇ ಮೊದಲಾದ ಪ್ರಮುಖ ಲಕ್ಷಣಗಳು ಮತ್ತು ಹಠಾತ್ ಸಾವು ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚು.

### ಮನುಷ್ಯ:




ಮನುಷ್ಯರಲ್ಲಿ ಸೋಂಕು ತಗಲುವಿಕೆಯಿಂದ ಹಿಡಿದು ರೋಗದ ಲಕ್ಷಣಗಳು ಕಾಣಿಸುವ ಅವಧಿಯು 10 ದಿನದಿಂದ 7 ವರ್ಷದವರೆಗೆ ಮುಂದುವರೆಯಬಹುದು. ಪ್ರಥಮ ಹಂತದಲ್ಲಿ ಜ್ವರ, ತಲೆನೋವು, ಸಾಮಾನ್ಯ ದೌರ್ಬಲ್ಯ ಅಥವಾ ಅಸ್ವಸ್ಥತೆ ಕಾಣಿಸಿಕೊಳ್ಳುವುದು. ಕಾಯಿಲೆ ಮುಂದುವರೆದಂತೆ, ನಿದ್ರಾಹೀನತೆ, ಆತಂಕ, ಗೊಂದಲ, ಸ್ವಲ್ಪ ಅಥವಾ ಭಾಗಶಃ ಪಾರ್ಶ್ವವಾಯು, ಉದ್ರೇಕ, ಭ್ರಮೆ, ಕಿರಿಕಿರಿ, ತೀವ್ರವಾದ ಉಸಿರಾಟ, ನುಂಗಲು ತೊಂದರೆ, ಮತ್ತು ಜಲಭೀತಿ (ನೀರಿನ ಭಯ). ರೋಗದ ಲಕ್ಷಣಗಳು ಕಾಣಿಸಿಕೊಂಡ ಕೆಲವೇ ದಿನಗಳಲ್ಲಿ ಮನುಷ್ಯರಲ್ಲಿ ಸಾವು ಸಂಭವಿಸಬಹುದು.

### ಜಾನುವಾರು:



ಜಾನುವಾರು ಪ್ರಾಣಿಗಳಾದ ಹಸು, ಎಮ್ಮೆ, ಕುರಿ ಮತ್ತು ಮೇಕೆಗಳಲ್ಲಿ ಮೌನ ಸ್ವರೂಪದ ಲಕ್ಷಣಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಜ್ವರ, ವೀಪರಿತ ಜೊಲ್ಲು ಸುರಿಯುವುದು, ವಿಚಿತ್ರ ಧ್ವನಿಯಲ್ಲಿ ಅರಚುವುದು, ಗೋಡೆಗೆ ಹಣೆ ಚಚ್ಚಿಕೊಳ್ಳುವುದು, ಕಲ್ಲು ಮಣ್ಣು ಸಿಕ್ಕಿದ್ದನ್ನು ಕಚ್ಚುವುದು, ಪಾರ್ಶ್ವವಾಯುಯಾಗಿ ಆಹಾರ ನೀರು ಸೇವಿಸಲಾಗದೆ ಯಾತನೆ ಅನುಭವಿಸಿ ನರಳಿ ಉಸಿರಾಟದ ತೊಂದರೆಯಿಂದ 2 ರಿಂದ 10 ದಿನಗಳಲ್ಲಿ ಸಾವನ್ನಪ್ಪುತ್ತವೆ.